C.R.P.67

Form No.4
(Criminal)
Deposition
Sheets
(R.P.No.57)

# 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 208/2019

ಚಾ.ಸಾ.–19 ಪ್ರಾ.ಸಾ.–10

| | |
|---|---|
| ಸಾಕ್ಷಿದಾರರ ಹೆಸರು | ಯೋಗೇಂದ್ರನಾಥ |
| ತಂದೆಯ ಹೆಸರು | ಕೆ ಮಾದಯ್ಯ |
| ವಯಸ್ಸು | 62 ವರ್ಷಗಳು |
| ಉದ್ಯೋಗ | ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿಗಳು |
| ವಾಸ | ಬೆಂಗಳೂರು |

**ದಿನಾಂಕಃ 20.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು ದಿಃ 5.3.2018 ರಿಂದ 18.11.2019 ರವರಗೆ ಶ್ರೀರಂಗಪಟ್ಟಣ ಉಪವಿಭಾಗದಲ್ಲಿ ಪೋಲೀಸ್ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ6.2.2019 ರಂದು ನಾನು ಪೊಲಿಸ್ ವರಿಷ್ಠಾಧಿಕಾರಿಗಳ ಆದೇಶದ ಮೇರೆಗೆ ಈ ಪ್ರಕರಣವನ್ನು ತನಿಖೆ ಮಾಡಿದ್ದೇನೆ. ಈ ಬಗ್ಗೆ ಎಸ್ ಪಿ ಅವರ ಆದೇಶವನ್ನು ನೋಡುತ್ತಿದ್ದೇನೆ. ಅದನ್ನು ನಿಪಿ 19 ಎಂದು ಗುರುತಿಸಲಾಯಿತು, ಅದರಲ್ಲಿ ನನ್ನ ಸಹಿ ಇದೆ ಅದನ್ನು ನಿಪಿ 19 ಎ ಎಂದು ಗುರುತಿಸಲಾಯಿತು. ದಿಃ 11.2.2019 ರಂದು

3. ಚಾಸಾ 17 ರವರಿಂದ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಪಡೆದುಕೊಂಡಿದ್ದೇನೆ. ಅದೇ ದಿನ ಚಾಸಾ 1 ರವರುನೀಡಿದ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡು ಅದರ ಆಧಾರದ ಮೇಲೆ ಪರಿಶಿಷ್ಟಜಾತಿ , ಪಂಗಡ ದೌರ್ಜನ್ಯ ಕಾಯಿದೆ ಅಡಿಯಲ್ಲಿ ಕಲಂಗಳನ್ನು ಅನ್ವಯಿಸಿಕೊಂಡು ನ್ಯಾಯಲಯಕ್ಕೆ ನಿವೇದಿಸಿಕೊಂಡಿದ್ದೇನೆ. ಈ ಬಗ್ಗೆ ನ್ಯಾಯಲಯಕ್ಕೆ ನಿವೇದನೆ ಕೊಟ್ಟಿದ್ದೇನೆ. ಸದರಿ

ನಿವೇದನೆ ಈಗ ನೋಡುತ್ತಿದ್ದೇನೆ. ಅದನ್ನು 18 ಎಂದು ಗುರುತಿಸಲಾಯಿತು. ಸಾಕ್ಷಿಗಳ ಸಹಿಯನ್ನು ನಿಪಿ 18 ಎ ಎಂದು ಗುರುತಿಸಲಾಯಿತು. ಮುಂದುವರಿದ ತನಿಖೆಯನ್ನು ಚಾಸಾ 19 ರವರಿಗೆ ಕೊಟ್ಟಿದ್ದೇನೆ.

4.

5. **ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:**

6. ಚಾಸಾ 1 ರವರು ನಿವೃತ್ತ ಸಹಾಯಕ ಉಪನಿರೀಕ್ಷಕರಾಗಿದ್ದಾರೆ. ದೂರನಲ್ಲಿ ಅವರು ಪೊಲೀಸ್ ಇಲಾಖೆಗೆ ಸಂಬಂಧಿಸಿದವರು ಎಂದು ಬರೆದಿಲ್ಲ ಎಂದರೆ ಸರಿ. ಚಾಸಾ 1 ರವರ ಪೂರ್ಣ ವಿಚಾರಗಳನ್ನು ನಾನು ನಿಪಿ 18 ಪಡೆದುಕೊಳ್ಳುವ ಕಾಲಕ್ಕೆ ಪಡೆದುಕೊಂಡಿರಲಿಲ್ಲ ಎಂದರೆ ಸರಿ. ಚಾಸಾ 1 ರವರ ಜೊತೆ ಹೇಳಿಕೆ ಕೊಡುವಾಗ ಬೇರೆ ಯಾರು ಬಂದಿದ್ದರು ಈಗ ನನಗೆ ನೆನಪಿಲ್ಲ. ನಿಪಿ 1 ರಲ್ಲಿ ಹಾಗೂ ಹೇಳಿಕೆಯಲ್ಲಿ ಆರೋಪಿತರು ಮತ್ತು ಚಾಸಾ 1 ರವರು ಮುಖತಃ ಭೇಟಿ ಆದ ಬಗ್ಗೆ ಉಲ್ಲೇಖ ಇರುವುದಿಲ್ಲ. ಆರೋಪಿತರ ಹೆಣ್ಣುಮಕ್ಕಳು ಇದೇ ಆಸ್ತಿಗೆ ಸಂಬಂಧಿಸಿದಂತೆ ಸಿವಿಲ್ ದಾವೆ ಸಲ್ಲಿಸಿ ನ್ಯಾಯಲಯದಿಂದ ತಡೆಯಾಜ್ಞೆ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಿವಾದಿತಜಾಗ ಸರ್ಕಾರದಿಂದ ಮಂಜೂರಾದ ಜಾಗ ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ರವರು ತಮ್ಮ ಹೇಳಿಕೆಯಲ್ಲಿ ಅವರಿಗೆ ವಿವಾದಿತ ಜಾಗ ಹೇಗೆ ಬಂದಿದೆ ಎಂದು ಹೇಳಿಲ್ಲ ಎಂದರೆ ಸರಿ. ಚಾಸಾ 1 ರವರು ನಿವೃತ್ತ ಪೊಲೀಸ್ ಇಲಾಖೆಯವರ ಪತ್ನಿ ಆದ್ದರಿಂದ ಅವರಿಗೆ ಸಹಾಯಮಾಡಲು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

# 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ